



**ಒಡಿಸ್ಸಿ** ಮತ್ತು ಭರತನಾಟ್ಯ ನೃತ್ಯಕಲಾವಿದೆಯಾಗಿ ದೇಶದ ಕಲಾರಸಿಕರ ಮನಗೆದ್ದಿರುವ ಸೋನಲ್ ಮಾನ್‌ಸಿಂಗ್ ರಾಜ್ಯಸಭಾ ಸದಸ್ಯೆಯಾಗಿ ಕೆಲಸ ಮಾಡಿದವರು. ಪಂಡಿತ್ ರವಿಶಂಕರ್ ಅವರ ಬಳಿಕ ಕಲಾಕ್ಷೇತ್ರದಿಂದ ನಾಮನಿರ್ದೇಶನಗೊಂಡವರು. ಜೀವಸಂಕುಲವನ್ನು ಸಮಗ್ರ ದೃಷ್ಟಿಕೋನದಲ್ಲಿ ನೋಡಬೇಕು ಎನ್ನುವ ಸೋನಲ್, ತಮ್ಮ ಸಂಸದರ ನಿಧಿಯಿಂದ ತೃತೀಯ ಲಿಂಗಿಗಳಿಗೆ ಅನೇಕ ವಿಧದಲ್ಲಿ ನೆರವು ಕಲ್ಪಿಸಿದವರು. ಅನೇಕ ಸಮಾಜಮುಖಿ ಕೆಲಸಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡವರು. 1944ರ ಏಪ್ರಿಲ್ 30ರಂದು ಅರವಿಂದ್ ಮತ್ತು ಪೂರ್ಣಿಮಾ ಪಕ್ವಾಸ್ ಅವರ ಮಗಳಾಗಿ ಮುಂಬೈಯಲ್ಲಿ ಜನಿಸಿದ ಅವರು ಭಾರತದ ಮೊದಲ ಐವರು ರಾಜ್ಯಪಾಲರ ಪೈಕಿ ಒಬ್ಬರಾದ, ಸ್ವಾತಂತ್ರ್ಯ ಹೋರಾಟಗಾರ ಮಂಗಲ್‌ದಾಸ್ ಪಕ್ವಾಸ್ ಅವರ ಮೊಮ್ಮಗಳು. ಅಜ್ಜನ ಪ್ರೀತಿಯ ಮೊಮ್ಮಗಳಾಗಿ ಅವರ ಬಾಲ್ಯ ಕಳೆದಿದ್ದು ದೇಶದ ವಿವಿಧ ರಾಜಭವನಗಳಲ್ಲಿ. ಓದು, ಆಟೋಟ, ಸಮಾಜ ಸೇವೆಯಲ್ಲಿ ಸದಾ ಮುಂದಿದ್ದ ಸೋನಲ್ ತಮ್ಮ ಬದುಕಿನಲ್ಲಿ ಆಯ್ಕೆ ಮಾಡಿಕೊಂಡಿದ್ದು ನೃತ್ಯವನ್ನು. ಹಿಂದಿ, ಇಂಗ್ಲಿಷ್, ಗುಜರಾತಿ, ಸಂಸ್ಕೃತ ಮತ್ತು ಜರ್ಮನಿ ಭಾಷೆಯಲ್ಲಿ ಪಾಂಡಿತ್ಯವುಳ್ಳವರು. ಸೌಕರ್ಯವುಳ್ಳ ಮೇಲ್ವರ್ಗದ ಕುಟುಂಬದವರಾದರೂ, ಬದುಕಿನ ಹಾದಿಯಲ್ಲಿ ಅನೇಕ ಸವಾಲುಗಳನ್ನು ಎದುರಿಸಿದರು. ಯಾವುದೇ ವಿಚಾರಗಳಿಗೆ ಸಂಬಂಧಿಸಿದಂತೆ ಸ್ಪಷ್ಟ ಮಾತುಗಳಲ್ಲಿ ತಮ್ಮ ನಿಲುವು ಹೇಳುವವರು. ಸಾಧನೆಯ ಹಾದಿಯಲ್ಲಿ ಪದ್ಮಭೂಷಣ ಮತ್ತು ಪದ್ಮವಿಭೂಷಣ ಪುರಸ್ಕಾರಗಳು ಅವರಿಗೆ ಸಂದಿವೆ. ಅವರೊಡನೆ 'ಮಯೂರ' ನಡೆಸಿದ ಮಾತುಕತೆಯ ಆಯ್ದ ಭಾಗ ಇಲ್ಲಿದೆ.

◆ **ಭಾರತೀಯ ಕಲಾಲೋಕದ ಧ್ರುವತಾರೆಗಳಲ್ಲಿ ನೀವೂ ಒಬ್ಬರು. ನಿಮ್ಮ ಬಾಲ್ಯವು ಇತರ ಮಕ್ಕಳಿಗಿಂತ ಹೇಗೆ ಭಿನ್ನವಾಗಿತ್ತು?**

ನಾನು ಅಜ್ಜನ ಪ್ರೀತಿಯ ಮೊಮ್ಮಗಳು. ನನ್ನ ಅಜ್ಜ ಮಂಗಲ್‌ದಾಸ್ ಪಕ್ವಾಸ್ ಸ್ವಾತಂತ್ರ್ಯಹೋರಾಟಗಾರರು. ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದಾಗ ಅವರನ್ನು ಕೇಂದ್ರ ಪ್ರಾಂತ್ಯದ (ಇಂದಿನ ಮಧ್ಯಪ್ರದೇಶದ) ಗವರ್ನರ್ ಆಗಿ ನೇಮಿಸಲಾಗಿತ್ತು. ಬಳಿಕ ಮುಂಬೈ ಮತ್ತು ಮೈಸೂರಿನ ಗವರ್ನರ್ ಆಗಿದ್ದರು. ಹಾಗಾಗಿ ನನ್ನ ಬಾಲ್ಯವು, ನಾಗ್‌ಪುರ, ಮುಂಬೈ ಮತ್ತು ಬೆಂಗಳೂರಿನ ರಾಜಭವನಗಳಲ್ಲಿ ಸುಂದರ ರಾಜಕುಮಾರಿಯ ಮಾದರಿಯಲ್ಲಿಯೇ ಕಳೆಯಿತು. ಅಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು, ಸಂಗೀತ ಬೈಠಕ್‌ಗಳು ನಿರಂತರ ನಡೆಯುತ್ತಿದ್ದವು. ಚಿಕ್ಕವಳಿದ್ದಾಗ ರಾಜಭವನದ ಸಭಾಂಗಣದಲ್ಲಿ ನಡೆಯುತ್ತಿದ್ದ ಸಂಗೀತ ಕಛೇರಿಗಳಲ್ಲಿ ನಿದ್ದೆ ತೂಗುತ್ತ, ಗಾಯಕರು ತರಾನಾ ಅಥವಾ ಠುಮ್ರಿ ಎತ್ತಿಕೊಳ್ಳುತ್ತಿದ್ದಂತೆಯೇ ಎಚ್ಚರಾಗುತ್ತಿದ್ದೆ. ಮುಂಬೈಯಲ್ಲಿ ಬಡೇ ಗುಲಾಮ್ ಅಲಿ ಖಾನ್ ಅವರ ಮನೆ ನಮ್ಮ ಅಜ್ಜನ ಮನೆಯ ಪಕ್ಕದಲ್ಲೇ ಇತ್ತು. ಅವರು ತಮ್ಮ ಮಗ ಮತ್ತು ಸೋದರನ ಜೊತೆಗೆ ಹಾರ್ಮೋನಿಯಂ ಮತ್ತು ತಾನ್‌ಪುರ ಹಿಡಿದು ನಮ್ಮಲ್ಲಿ ಬಂದು ಸಂಗೀತದ ರಸದೌತಣ ಉಣಿಸುತ್ತಿದ್ದರು. ಮಳೆ ಬಂದರೆ, ಮಲ್ಹಾರ ಹಾಡಿದರೆ, ಗುಡುಗು ಸಿಡಿಲುಗಳೇ ಅವರ ಗಾಯನಕ್ಕೆ ಚಪ್ಪಾಳೆ ಹೊಡೆದಂತೆ ಭಾಸವಾಗುತ್ತಿತ್ತು. ಅಲ್ಲಿದ್ದಾಗ ನನ್ನ ಪ್ರತೀ ಬೆಳಗೂ ಬಡೇಗುಲಾಮ್ ಅಲಿ ಖಾನರ ಸಂಗೀತ ಲಹರಿಯೊಂದಿಗೇ ಆರಂಭವಾಗುತ್ತಿತ್ತು.

ಜವಾಹರ್‌ಲಾಲ್ ನೆಹರು, ಸಿ. ರಾಜಗೋಪಾಲಾಚಾರಿ, ರಾಜೇಂದ್ರ ಪ್ರಸಾದ್ ಅವರಂತಹ ಸಮಕಾಲೀನರಾದ ದಿಗ್ಗಜರು ಮನೆಗೆ ಬಂದು ಅಜ್ಜನೊಡನೆ ಮಾತನಾಡುತ್ತಿದ್ದರು. ಅವರೊಂದಿಗೆ ಮಾತನಾಡುವ ಅವಕಾಶ ನನಗೂ ದೊರೆಯುತ್ತಿತ್ತು. ರಾಜಕೀಯ ಮಾತ್ರವಲ್ಲ,